


# ದಕ್ಷಿಣ ಅಮೆರಿಕಾದಲ್ಲಿ ವೇದಾಂತ ಭಾವಧಾರೆ

ಸ್ವಾಮಿ ಆತ್ಮಜ್ಞಾನಂದ

ಬಹುದೂರದ ದಕ್ಷಿಣ ಅಮೆರಿಕಾದಲ್ಲಿ ಶ್ರೀರಾಮಕೃಷ್ಣ ಭಾವಧಾರೆ! ಊಹಿಸಲೂ ಸಾಧ್ಯವಿಲ್ಲದ ಅಚ್ಚರಿಯ ಅನೇಕ ಸಂಗತಿಗಳು ಪ್ರಪಂಚದಲ್ಲಿ ನಡೆಯುತ್ತವೆ ಎಂಬುದಕ್ಕೆ ಉತ್ತಮ ಉದಾಹರಣೆಯಿದು. ಅಲ್ಲಿ ವೇದಾಂತ ಭಾವಧಾರೆಯ ಜೊತೆಜೊತೆಗೆ ದಿವ್ಯತ್ರಯರ ಭಾವ ಪ್ರಚಾರವೂ ನಡೆದಿರುವುದು ವಿಶೇಷ. ಈ ಕುರಿತು ಬರೆದಿರುವ ಪೂಜ್ಯ ಸ್ವಾಮೀಜಿಯವರು 'ವಿವೇಕಪ್ರಭ' ದ ಸಂಪಾದಕರಾಗಿದ್ದರು. ಮೈಸೂರು ಶ್ರೀರಾಮಕೃಷ್ಣ ಆಶ್ರಮದ ಅಧ್ಯಕ್ಷರೂ ಆಗಿದ್ದ ಅವರು, ಪ್ರಸ್ತುತ ಬ್ರೆಝಿಲ್‌ನ ರಿಯೋ ಡಿ ಜನೇರಿಯೋ ಆಶ್ರಮದ ಅಧ್ಯಕ್ಷರಾಗಿದ್ದಾರೆ.

ಶ್ರೀರಾಮಕೃಷ್ಣರನ್ನು ಆಧುನಿಕ ಯುಗದ ಪ್ರವಾದಿಯೆಂದೂ, ನವ ವೇದಾಂತದ ಮೂಲಸೆಲೆಯೆಂದೂ ಹಲವು ಮಂದಿ ಪರಿಗಣಿಸಿದ್ದು ಅತ್ಯಂತ ಕುತೂಹಲಕರವಾದ ಸಂಗತಿ. ಜಗತ್ತಿನ ಎಲ್ಲೆಡೆ ತಮ್ಮ ಜೀವನ-ಉಪದೇಶಗಳು ಪಸರಿಸುವುದನ್ನು ಅವರು ಮೊದಲೇ ಕಂಡುಕೊಂಡಿದ್ದರು. ಬ್ರಿಟಿಷ್ ಆಡಳಿತದ ಕಾಲದಲ್ಲಿ ಭಾರತದ ಒಂದು ಕುಗ್ರಾಮದಲ್ಲಿ ಜನಿಸಿದ್ದರೂ, ಅವರಿಗಿದ್ದ ವಿಶ್ವವಿಶಾಲ ದೃಷ್ಟಿಕೋನವು ಆ ಕಾಲದ ವಿದ್ಯಾವಂತ ಮನಸ್ಸುಗಳಿಗೂ ಊಹೆಗೆ ನಿಲುಕದ ವಿಷಯವಾಗಿತ್ತು! ಎಲ್ಲ ಆಧ್ಯಾತ್ಮಿಕ ಪಥಗಳ ಅಂಗೀಕಾರ ಹಾಗೂ ಸಮನ್ವಯ ಇವು ಶ್ರೀರಾಮಕೃಷ್ಣರಲ್ಲಿದ್ದ, ಹಿಂದೆಂದೂ ಕಂಡಿಲ್ಲದ - ನವೀನ ದೃಷ್ಟಿಕೋನದ ವಿಶೇಷತೆಯಾಗಿತ್ತು. ಇದು ಯುವಕ, ವೃದ್ಧರೆಂಬ ತಾರತಮ್ಯವಿಲ್ಲದೆ ಎಲ್ಲರನ್ನೂ ಆಕರ್ಷಿಸಿತು — ದುಂಬಿಗಳನ್ನು ಸೆಳೆಯುವ ಕುಸುಮದಂತೆ. ಅವರ ದಣಿವಿಲ್ಲದ ಸುಮಧುರ ವಚನಸುಧೆಯನ್ನು ಹೀರಲು ಎಲ್ಲರೂ ಅತಿ ಕಾತರರಾಗಿರುತ್ತಿದ್ದರು. ಆ ಕಾಲಕ್ಕೆ ಪ್ರಸಿದ್ಧರಾಗಿದ್ದ ಜನರ, ವಾಗ್ಮಿಗಳ ಮುಂದೆ ಅವರು 'ನರೇಂದ್ರನು ಜಗತ್ತಿಗೆ ಶಿಕ್ಷಣ ನೀಡುತ್ತಾನೆ' ಎಂದು ಅಳುಕಿಲ್ಲದೆ ಸಾರಿದ್ದರು ಶ್ರೀರಾಮಕೃಷ್ಣರು!

ಇದನ್ನು ಕೇಳಿ ಗೊಂದಲಕ್ಕೆ ಒಳಗಾದ ನರೇಂದ್ರನು ಹಲವು ಬಾರಿ ಪ್ರತಿಭಟಿಸುತ್ತಿದ್ದ, ಶ್ರೀರಾಮಕೃಷ್ಣರಿಗೆ ತನ್ನ ಮೇಲಿದ್ದ ಅಪಾರ ಪ್ರೀತಿಯಿಂದಾಗಿಯೇ ಅವರು ಈ ಬಗೆಯ ಕಲ್ಪನೆಗಳನ್ನು ಮಾಡಿಕೊಳ್ಳುತ್ತಾರೆ ಎನ್ನುತ್ತಿದ್ದ. ಜಡಭರತನಂತೆ ಅವರು ಮತ್ತೊಮ್ಮೆ ಜನ್ಮವೆತ್ತಬೇಕಾಗುವುದು ಎಂದು ಅವನು ಎಚ್ಚರಿಸುತ್ತಿದ್ದ. ಒಂದು ಜಿಂಕೆಯ ಮೇಲೆ ಅತೀವ ಮಮತೆಯನ್ನು ಹೊಂದಿದ್ದ ಜಡಭರತನು ಮುಂದಿನ ಜನ್ಮದಲ್ಲಿ ಜಿಂಕೆಯಾಗಿಯೇ ಜನ್ಮತಳೆಯಬೇಕಾಯಿತು. ಚಿಂತೆಗೊಳಗಾದ ಶ್ರೀರಾಮಕೃಷ್ಣರು ಜಗನ್ಮಾತೆಯ ಬಳಿಗೆ ಓಡಿಹೋಗಿ, ಇದನ್ನೆಲ್ಲ ಅವಳ ಮುಂದೆ ಹೇಳಿಕೊಳ್ಳುತ್ತಿದ್ದರು. ಆದರೆ ಆಕೆ ನೀಡುತ್ತಿದ್ದ ಸಾಂತ್ವನದಿಂದ ಸಮಾಧಾನಗೊಂಡು ಮರಳುತ್ತಿದ್ದರು, ಹಾಗೂ ತಾವು ಹೇಳಿದ್ದೆಲ್ಲ ನಿಜವಾಗುವುದು ಎಂದು ತಾಯಿ ನನಗೆ ತೋರಿಸಿಕೊಟ್ಟಿದ್ದಾಳೆ ಎಂದು ಹೇಳುತ್ತಿದ್ದರು. ಮುಂದೆ ಅವರ ಮಾತು ನಿಜವಾಯಿತೆಂಬುದು ಐತಿಹಾಸಿಕ ಸತ್ಯ. ಶ್ರೀರಾಮಕೃಷ್ಣರು ತಮ್ಮ ಪ್ರಿಯ ಶಿಷ್ಯ ಸ್ವಾಮಿ ವಿವೇಕಾನಂದರ ಮೂಲಕ ಅನೇಕ ಅದ್ಭುತಗಳನ್ನೇ ಮಾಡಿ ತೋರಿಸಿದರು.

ಶ್ರೀರಾಮಕೃಷ್ಣರ ಸೊಸೆ ಲಕ್ಷ್ಮೀದೇವಿ ಹೇಳಿರುವ ಒಂದು ಘಟನೆಯ ಮೂಲಕ ನಮಗೆ ತಿಳಿದು ಬರುತ್ತದೆ. ಶ್ರೀರಾಮಕೃಷ್ಣರು ಯಾವುದೇ ಒಂದು ಪ್ರದೇಶಕ್ಕೋ, ದೇಶಕ್ಕೋ ಅಥವಾ ಕೆಲವು ವ್ಯಕ್ತಿಗಳಿಗಾಗಿಯೋ ಬಂದವರಲ್ಲ, ಅವರು ಇಡೀ ಮನುಕುಲದ ಒಳಿತಿಗಾಗಿ ಜನ್ಮವೆತ್ತಿ ಬಂದವರು ಎಂದು: ''ಒಂದು ದಿನ ನಾನು ಶ್ರೀಮಾತೆಯವರೊಂದಿಗೆ ಠಾಕೂರರಿಗೆ ಊಟ ತೆಗೆದುಕೊಂಡು ಹೋಗಿದ್ದೆ. ಅವರೊಂದಿಗಿದ್ದ ರಾಖಾಲ ಹಾಗೂ ಉಳಿದವರು ಕೂಡಲೇ ಅಲ್ಲಿಂದ ಎದ್ದು ಹೋದರು, ನಾವಷ್ಟೇ ಅಲ್ಲಿದ್ದೆವು. ಹಾಸಿಗೆಯಲ್ಲಿ ಮಲಗಿದ್ದ ಠಾಕೂರರು ಸಮಾಧಿಯಲ್ಲಿದ್ದರು. ಅವರು ಜೀವವಿಲ್ಲದ ಹಾಗೆ ಕಂಡು ಬಂದರು. ಅವರ ಆರೋಗ್ಯದ ಬಗ್ಗೆ ಅತ್ಯಂತ ಆತಂಕದಿಂದಿದ್ದ ಶ್ರೀಮಾತೆಯವರು, ಅವರು ತೀರಿಕೊಂಡರೆಂದೇ ಭಾವಿಸಿ ಅಳತೊಡಗಿದರು. ರಾಖಾಲ ಮುಂತಾದವರು ಅವರು ಅಳುವುದನ್ನು ಕೇಳಿ ಮತ್ತೆ ಕೋಣೆಯೊಳಕ್ಕೆ ಬಂದರು, ಹಾಗೂ ಅವರ ದೇಹವನ್ನು ಜೋರಾಗಿ ಉಜ್ಜತೊಡಗಿದರು... ಆಗ ಠಾಕೂರರಿಗೆ ಮತ್ತೆ ಪ್ರಜ್ಞೆ ಬಂತು. ಅವರ ಕಣ್ಣು ತೆರೆದು ಏನಾಯಿತೆಂದು ಆಶ್ಚರ್ಯದಿಂದ ಕೇಳಿದರು. ಅವರೆಲ್ಲರೂ ಭಯಗೊಂಡಿದ್ದನ್ನು ಕೇಳಿ ಠಾಕೂರರು ಹೇಳಿದರು: ''ನಾನು ಬಿಳಿ ಜನರ ಪ್ರದೇಶದಲ್ಲಿದ್ದೆ. ಅವರ ಚರ್ಮ ಬಿಳಿಯದಾಗಿತ್ತು, ಅವರ ಹೃದಯ ಕೂಡಾ ಬಿಳಿ, ಸರಳರೂ ಪ್ರಾಮಾಣಿಕರೂ ಆಗಿದ್ದರು ಅವರು. ಅದು ತುಂಬಾ ಸುಂದರವಾದ ದೇಶ. ಅಲ್ಲಿಗೆ ನಾನು ಹೋಗುತ್ತೇನೆ ಅಂತ

ನನಗನ್ನಿಸುತ್ತದೆ.'' *(They lived with God, Swami Chetananada, P.81)* ಶ್ರೀರಾಮಕೃಷ್ಣರ ಧರ್ಮ ಸಮನ್ವಯದ ವಿಶ್ವವ್ಯಾಪಕವಾದ ಸಂದೇಶಗಳು ಜಗತ್ತಿನ ಎಲ್ಲೆಡೆ ವ್ಯಾಪಿಸುವುದನ್ನು ನಾವು ಕಾಣಬೇಕು. ಈ ಸುಂದರ ಭೂಮಿಯಲ್ಲಿ ಶಾಶ್ವತವಾದ ಶಾಂತಿ ನೆಲೆಸಬೇಕಿದ್ದರೆ ಇಲ್ಲಿ ಧರ್ಮ, ವರ್ಣ, ಲಿಂಗ, ದೇಶ ಭೇದಗಳೆಲ್ಲ ನಶಿಸಿ, ಮಾನವರೆಲ್ಲ ಒಂದೇ ಎಂಬ ತತ್ತ್ವವನ್ನು ಬುದ್ಧಿವಂತರೆಲ್ಲರೂ ಸ್ವೀಕರಿಸಬೇಕು. ಇದು ಅತ್ಯಂತ ಸಹಜ.

ಇಡೀ ವಿಶ್ವವೇ ಒಂದು ಗೂಡಿನಂತೆ ಎಂದು ಉಪನಿಷತ್ತುಗಳು ಸಾರುತ್ತವೆ :**'ಯತ್ರ ವಿಶ್ವಂ ಭವತಿ ಏಕನೀಡಮ್'** *(ಅಥರ್ವವೇದ, ೯.೬.೩೫).* ಶ್ರೀರಾಮಕೃಷ್ಣರು ಶ್ರೀಮಾತೆ ಹಾಗೂ ತಮ್ಮ ಶಿಷ್ಯರೊಡನೆ ಬಹುತೇಕ ಜಗತ್ತಿನ ಎಲ್ಲೆಡೆ ಸದ್ದಿಲ್ಲದೆ ದೃಢ ಹೆಜ್ಜೆಗಳಿಂದ ಬೇರೂರಿ ವ್ಯಾಪಿಸುತ್ತ, ಈ ಜಗತ್ತನ್ನು ಒಂದೇ ಕುಟುಂಬವನ್ನಾಗಿಸುತ್ತಿದ್ದಾರೆ ಎಂದು ನಾವು ದೃಢಮನಸ್ಕರಾಗಿ ಹೇಳಬಹುದು. ಜಗತ್ತಿನ ವಿಭಿನ್ನ ಪ್ರದೇಶಗಳಲ್ಲಿರುವ ಹಲವಾರು



ಮಂದಿ ಭಕ್ತರು ಶ್ರೀರಾಮಕೃಷ್ಣ, ಶಾರದಾದೇವಿ, ಸ್ವಾಮಿ ವಿವೇಕಾನಂದ, ಸ್ವಾಮಿ ಬ್ರಹ್ಮಾನಂದ ಹಾಗೂ ಇನ್ನಿತರರ ದರ್ಶನ ಪಡೆದಿದ್ದಾರೆ. ಅವರು ತಮ್ಮ ಅಳತೆಗೆ ನಿಲುಕುವಷ್ಟು ಈ ಅನುಭವಗಳಿಗೆ ಸಾಕ್ಷಿಯಾಗಿದ್ದಾರೆ. ಆಧ್ಯಾತ್ಮಿಕತೆ ಮತ್ತು ಅನುಭವಗಳ ದೃಢೀಕರಣಕ್ಕೆ ಶ್ರೀರಾಮಕೃಷ್ಣ, ಶ್ರೀಮಾತೆ ಹಾಗೂ ಅವರ ನೇರ ಶಿಷ್ಯರುಗಳು ಮಾನದಂಡವಾಗಿದ್ದಾರೆ! ಆಧ್ಯಾತ್ಮಿಕ ಮಹಾಪ್ರವಾಹವೆಂದೇ ಪ್ರಖ್ಯಾತರಾದ ಶ್ರೀರಾಮಕೃಷ್ಣರ ಭಕ್ತರು ಹಾಗೂ ಅನುಯಾಯಿಗಳು ಎಲ್ಲೆಡೆ ವರ್ಧಿಸುತ್ತಿದ್ದಾರೆ; ಅವರು ಮಸುಕಾದ, ಅಸ್ಪಷ್ಟ ಆಧ್ಯಾತ್ಮಿಕತೆಯ ಹಿಂದೆ ಧಾವಿಸಿ ಹೋಗುತ್ತಿಲ್ಲ; ನಿಜವಾದ ಆಧ್ಯಾತ್ಮಿಕತೆಯ ಬೆನ್ನುಹತ್ತಿ ಹೋಗುತ್ತಿದ್ದಾರೆ.

ದಕ್ಷಿಣಾರ್ಧ ಭೂಗೋಳದಲ್ಲಿರುವ ದಕ್ಷಿಣ ಅಮೆರಿಕಾ ಭೂಖಂಡದಲ್ಲಿ ಹನ್ನೆರಡು ಸ್ವತಂತ್ರ ದೇಶಗಳಿವೆ. ಇವು ಸುಮಾರು ೧,೭೮,೪೦,೦೦೦ ಚ.ಕಿ.ಮೀ ವಿಸ್ತೀರ್ಣದ ಭೂಪ್ರದೇಶವನ್ನು ಆವರಿಸಿದೆ. ಇತರ ಭೂಪ್ರದೇಶಗಳಿಂದ ಈ ಭೂಖಂಡವನ್ನು ಪ್ರತ್ಯೇಕಿಸಿರುವ ಬೃಹತ್ತಾದ ಸಾಗರಗಳು ಇದನ್ನು ಬಾಹ್ಯ ಪ್ರಭಾವಗಳಿಂದ ರಕ್ಷಿಸಿವೆ; ಆದರೆ ನಂತರ ಯೂರೋಪಿಯನ್ನರು ನಡೆಸಿದ ಆಕ್ರಮಣಗಳು ಎಲ್ಲವನ್ನೂ ಬದಲಾಯಿಸಿಬಿಟ್ಟವು. ವಿವಿಧ ಕಾಲಘಟ್ಟಗಳಲ್ಲಿ ಈ ಪ್ರದೇಶಗಳಲ್ಲಿ ಅರಳಿ ನಿಂತ ಸ್ಥಳೀಯ ಸಂಸ್ಕೃತಿಗಳು ತಮ್ಮದೇ ಆದ ಧಾರ್ಮಿಕ ನಂಬಿಕೆಗಳನ್ನೂ ಆಚರಣೆಗಳನ್ನೂ ಹೊಂದಿದ್ದವು. ಪ್ರಕೃತಿ ಆರಾಧನೆ, ಪಿತೃಪೂಜೆ ಹಾಗೂ ದೈವಾರಾಧನೆ ಇವುಗಳನ್ನು, ವಿವಿಧ ವಿಧಿವಿಧಾನಗಳೊಂದಿಗೆ ಆಚರಿಸುವುದನ್ನು ಇಂದಿಗೂ ಬ್ರೆಝಿಲ್, ಪೆರು ಹಾಗೂ ಚಿಲಿ ದೇಶಗಳ ಕಾಡುಪ್ರದೇಶಗಳಲ್ಲಿರುವ ಬುಡಕಟ್ಟು ಜನಾಂಗಗಳಲ್ಲಿ ಕಾಣಬಹುದಾಗಿದೆ. ಬ್ರೆಝಿಲ್ ದೇಶವು ದಕ್ಷಿಣ ಅಮೆರಿಕದ ದೇಶಗಳಲ್ಲೇ ಅತಿ ಹೆಚ್ಚು ಜನಸಂಖ್ಯೆಯಿರುವ ದೇಶ; ಅಲ್ಲಿ ೨೦೨೧ರ ಗಣತಿಯಂತೆ ೧೫.೭ ಕೋಟಿಗೂ ಹೆಚ್ಚು ಜನರಿದ್ದಾರೆ. ಅನಂತರ ಕ್ರಮವಾಗಿ ಕೊಲಂಬಿಯಾ, ಅರ್ಜೆಂಟೀನಾ, ವೆನಿಜುಲಾ ಹಾಗೂ ಪೆರು ಬರುತ್ತವೆ. ಈ ಭೂಖಂಡದ ಜನಾಂಗೀಯ ಹಾಗೂ ಸಾಂಸ್ಕೃತಿಕ ಲಕ್ಷಣಗಳು ಬೆಳೆದು ಬಂದುದು, ಇಲ್ಲಿನ ಮೂಲ ನಿವಾಸಿಗಳು ಯೂರೋಪಿನ ಆಕ್ರಮಣಕಾರಿಗಳು ಹಾಗೂ ಇತರ ಪ್ರದೇಶಗಳಿಂದ (ಮುಖ್ಯವಾಗಿ ಆಫ್ರಿಕಾದಿಂದ) ಬಂದ ಜನರೊಂದಿಗೆ ಬೆರೆತದ್ದರಿಂದ. ಬಹುಪಾಲು ಇಲ್ಲಿನ ಜನರು ಸ್ಪಾನಿಷ್ ಅಥವಾ ಪೋರ್ಚುಗೀಸ್ ಭಾಷೆಗಳನ್ನು ಆಡುತ್ತಾರೆ, ಹಾಗೂ ಪಾಶ್ಚಿಮಾತ್ಯರ ಪರಂಪರೆಯನ್ನು ಅಳವಡಿಸಿಕೊಂಡಿದ್ದಾರೆ. ಪುರಾತತ್ತ್ವಶಾಸ್ತ್ರ ಹಾಗೂ ಭೂಶೋಧನೆ-ಅಗೆತಗಳಿಂದ ದಕ್ಷಿಣ ಅಮೆರಿಕಾದಲ್ಲಿ ಮಾನವನ ನೆಲೆ ಸುಮಾರು ಕ್ರಿ.ಪೂ.೯೦೦೦ ದಿಂದಲೇ ಇತ್ತು ಎಂದು ತಿಳಿದು ಬಂದಿದೆ. ಉತ್ತರ ಅಮೆರಿಕಾದೊಂದಿಗೆ ದಕ್ಷಿಣ ಅಮೆರಿಕಾ ಹೊಂದಿದ್ದ ಸಂಪರ್ಕವೆಲ್ಲವೂ ಬೇರಿಂಗ್ ಸ್ಟ್ರೈಟ್ ಮೂಲಕ ಮಾತ್ರ. ಇಲ್ಲಿ ಮಾಯಾ ಹಾಗೂ ಇಂಕಾ ನಾಗರಿಕತೆಗಳು ಸಮೃದ್ಧಗೊಂಡವು. ಇಲ್ಲಿನ ಪರ್ವತಶ್ರೇಣಿಗಳಲ್ಲಿ ಅತ್ಯಂತ ಸೂಕ್ಷ್ಮವೂ, ಅಸಾಧಾರಣ ಕಲ್ಲಿನ ರಚನೆಗಳಿಂದಲೂ ಕೂಡಿದ ಕಟ್ಟಡಗಳಿರುವ ಅನೇಕ ಪಟ್ಟಣಗಳಿದ್ದವು. ಇಂದು ಈ ಸಂಸ್ಕೃತಿಗಳ ಅವಶೇಷಗಳು ಪ್ರವಾಸಿಗರ ತಾಣವಾಗಿದೆ! ಇಲ್ಲಿನ ಮೂಲ ನಿವಾಸಿಗಳಿಗೆ ಹಂತಹಂತಗಳಿರುವ ಕೃಷಿ, ಜಾನುವಾರು ಸಾಕಣೆ ಮುಂತಾದ ನುರಿತ ಕೆಲಸಗಳು ತಿಳಿದಿದ್ದವು; ಅದಲ್ಲದೆ ಚಿನ್ನ, ವಜ್ರ ಮುಂತಾದವನ್ನು ಕೂಡ ಅವರು ಗಣಿಗಳಿಂದ ತೆಗೆದು ಸಂಸ್ಕರಿಸುತ್ತಿದ್ದರು. ೧೫೩೦ರ ಸುಮಾರಿಗೆ ವಿದೇಶಿ ಆಕ್ರಮಣಕಾರರಿಂದ ದಕ್ಷಿಣ ಅಮೆರಿಕಾದ ನೈಸರ್ಗಿಕ ಸಂಪನ್ಮೂಲಗಳನ್ನು ನಿರಂತರ ಲೂಟಿ ಮಾಡಲಾಯಿತು. ಇವುಗಳಲ್ಲಿ ಮೊದಲು ಸ್ಪೈನ್, ನಂತರ ಪೋರ್ಚುಗಲ್ ದೇಶಗಳ ಪಾಲು ಹಿರಿದು. ಸ್ಪರ್ಧೆಯಲ್ಲಿ ತೊಡಗಿ ವಸಾಹತುಗಳನ್ನು ಸ್ಥಾಪಿಸುತ್ತಿದ್ದ ಈ ದೇಶಗಳು ಕ್ರಮೇಣ ಇಲ್ಲಿನ ಭೂಭಾಗಗಳ ಹಾಗೂ ನೈಸರ್ಗಿಕ ಸಂಪನ್ಮೂಲಗಳ ಮೇಲೆ ಹಕ್ಕು ಸ್ಥಾಪಿಸಿದರು; ಇಡೀ ಭೂಖಂಡವನ್ನು ವಿವಿಧ ವಸಾಹತು ಪ್ರದೇಶಗಳನ್ನಾಗಿ ವಿಂಗಡಿಸಿದರು.

ಯೂರೋಪಿಯನ್ ವಸಾಹತುಗಳಲ್ಲಿದ್ದ ಅಮೆರಿಕಾದ ಮೂಲ ನಿವಾಸಿಗಳನ್ನು ಅವರ 'ಅಸಂಸ್ಕೃತ' ರೀತಿನೀತಿಗಳ ಕಾರಣದಿಂದ ದೌರ್ಜನ್ಯವೆಸಗಿ, ಗುಲಾಮರನ್ನಾಗಿ ಮಾಡಿಕೊಂಡು ವಾಣಿಜ್ಯ, ಕೃಷಿ ಹಾಗೂ ಗಣಿಕಾರಿಕೆಯ ಕೆಲಸಗಳಿಗಾಗಿ ದುಡಿಸಿಕೊಳ್ಳಲಾಯಿತು. ಇದರೊಂದಿಗೆ ಆಫ್ರಿಕಾದ ಗುಲಾಮರನ್ನೂ ಅಲ್ಲಿ ಬಳಸಿಕೊಂಡರು. ಕಬ್ಬು, ಕಾಫಿ ಹಾಗೂ ಇನ್ನಿತರ ಅಗತ್ಯ ವಸ್ತುಗಳಿಗಾಗಿ ವಿದೇಶೀ ಆಕ್ರಮಣಕಾರರು ಅಲ್ಲಿನವರನ್ನೇ ಗುಲಾಮರನ್ನಾಗಿಸಿದರು. ರಸ್ತೆ, ಸೇತುವೆ ಹಾಗೂ ಇನ್ನಿತರ ಸೌಕರ್ಯಗಳ ನಿರ್ಮಾಣಗಳು ಈ ಗುಲಾಮರ ಹೆಗಲ ಮೇಲೆ ಬಿದ್ದಿತು! ಅವರ ಮೇಲೆ ಕ್ರೈಸ್ತಧರ್ಮವನ್ನು ಹೇರಲಾಯಿತು. ಸ್ಥಳೀಯ ಸಂಸ್ಕೃತಿ ಆಚರಣೆಗಳನ್ನು ಪರಿವರ್ತಿಸುವುದರಲ್ಲಿ ಸ್ಪೈನ್ ದೇಶದವರೇ ಮೊದಲಿಗರಾದರು. ಸ್ಥಳೀಯ ಭಾಷೆಗಳನ್ನು ಗಣನೆಗೆ ತೆಗೆದುಕೊಳ್ಳದೆ, ಧರ್ಮಪ್ರಚಾರದ ಸಾಧನವಾಗಿ ಸ್ಪಾನಿಷ್ ಭಾಷೆಯನ್ನು ಹೇರಲಾಯಿತು. ಇದರ ಪರಿಣಾಮವಾಗಿ ಇಂದು ಅನೇಕ ಸ್ಥಳೀಯ ಸಂಪ್ರದಾಯಗಳು ಹಾಗೂ ಭಾಷೆಗಳು ನಾಶವಾಗಿವೆ; ಅಳಿದುಳಿದ ಕೆಲವೇ ಬುಡಕಟ್ಟುಗಳು ಅಮೆಜಾನ್ ಅರಣ್ಯ ಹಾಗೂ ಇತರ ದೂರದ ಪ್ರದೇಶಗಳಿಗೆ ತಳ್ಳಲ್ಪಟ್ಟಿವೆ. ಇಂದಿಗೂ ಕೂಡ ಅವರ ಮೇಲಿನ ಶೋಷಣೆ ಮುಂದುವರಿದಿದೆ. ನೈಸರ್ಗಿಕ ಸಂಪನ್ಮೂಲಗಳ ಹಾಗೂ ನೆಲದ ಮೇಲೆ ಅವರಿಗಿರುವ ಹಕ್ಕನ್ನು ಇಂದಿನ ಆಧುನಿಕ 'ಸುಸಂಸ್ಕೃತ'ರೆನ್ನಿಸಿರುವ, ಸುಶಿಕ್ಷಿತ ಮಂದಿ ಅಲ್ಲಗಳೆದಿದ್ದಾರೆ–ಇದೇ ಅತ್ಯಂತ ದುರದೃಷ್ಟಕರವಾದ ಸಂಗತಿ. ಈ ಎಲ್ಲ ದೇಶಗಳಲ್ಲಿ ಗುಲಾಮಗಿರಿಯನ್ನು ನಾಶಮಾಡಲಾಗಿದೆ. ೧೮೨೩ರಲ್ಲಿ ಚಿಲಿ ದೇಶದಿಂದ ಆರಂಭಿಸಿ, ೧೮೮೮ರಲ್ಲಿ ಬ್ರೆಝಿಲ್ ದೇಶದವರೆಗೂ ಇದು ಮುಂದುವರಿಯಿತು. ಅಂದಾಜಿನ ಪ್ರಕಾರ ದಕ್ಷಿಣ ಅಮೆರಿಕಾದಲ್ಲಿ ೯೦% ಜನರು ಕ್ರೈಸ್ತರು – ಪ್ರಧಾನವಾಗಿ ರೋಮನ್ ಕ್ಯಾಥೋಲಿಕ್ ಜನರು. ಆಫ್ರಿಕಾ ಮೂಲದ ಧರ್ಮಗಳಾದ ಸ್ಯಾಂಟೋ ಡೈಮ್, ಕ್ಯಾಂಡೋಂಬಲ್, ಸ್ಪಿರಿಟಿಸ್ಟ್ ಹಾಗೂ ಉಂಬಾಡಾ – ಇವು ಕೂಡ ದಕ್ಷಿಣ ಅಮೆರಿಕಾದ ಎಲ್ಲೆಡೆ ಸರ್ವೇಸಾಮಾನ್ಯವಾಗಿ ಕಂಡುಬರುತ್ತವೆ.

ದಕ್ಷಿಣ ಅಮೆರಿಕಾ ಭೂಖಂಡವು, ಆಫ್ರಿಕಾದ ಜನರು ಅತ್ಯಧಿಕ ಸಂಖ್ಯೆಯಲ್ಲಿ ವಾಸಿಸುವ ಪ್ರದೇಶಗಳಲ್ಲಿ ಒಂದಾಗಿದೆ. ಆಫ್ರಿಕಾದ ವಲಸಿಗರು ತಮ್ಮ ಮೂಲ ನಂಬಿಕೆಗಳನ್ನು ಮರೆಯದೆ ಕ್ರೈಸ್ತಧರ್ಮವನ್ನು ತಮ್ಮಲ್ಲಿ ಅಳವಡಿಸಿಕೊಂಡಿದ್ದಾರೆ, ಹಾಗೂ ತಮ್ಮದೇ ಆದ ಆಚರಣೆಗಳನ್ನು ರೂಪಿಸಿಕೊಂಡಿದ್ದಾರೆ. ರಿಯೊ ಡಿ ಜನಿರೋದಲ್ಲಿ 'ಫೆಸ್ಟಾಡಿ ಲೆಮೆಂಜಾ' ಎಂಬ ಒಂದು ಸಂಪ್ರದಾಯವಿದೆ. ಲೆಮೆಂಜಾ ಎಂಬ ಸಮುದ್ರದೇವತೆಯನ್ನು ಪೂಜಿಸಿದ ನಂತರ ಇಲ್ಲಿನ ಸ್ಥಳೀಯ ಜನರು, ಆಕೆಯ ಮೂರ್ತಿಯನ್ನು ಭಕ್ತಿಯಿಂದ ಸಮುದ್ರಕ್ಕೆ ಕೊಂಡೊಯ್ದು, ಹೂವು ಮುಂತಾದವನ್ನು ಅರ್ಪಿಸಿ, ಬಳಿಕ ನೀರಿನಲ್ಲಿ ಮುಳುಗಿಸುತ್ತಾರೆ. ಭಾರತದಲ್ಲಿ ನಡೆಯುವ (ಮುಖ್ಯವಾಗಿ ಬಂಗಾಳದಲ್ಲಿ) ದುರ್ಗಾ ಅಥವಾ ಕಾಳಿಯನ್ನು ವಿಸರ್ಜನೆ ಮಾಡುವ ರೀತಿಯಲ್ಲೇ ಈ ಆಚರಣೆಯದೆ! ಸಮುದ್ರವನ್ನು ಅವರು ತಾಯಿಯೆಂದೇ ಭಾವಿಸುತ್ತಾರೆ; ಎಲ್ಲ ಪೂಜೆ, ಭಕ್ತಿಗಳಿಗೆ ಆಕೆ ಪಾತ್ರಳಾಗುತ್ತಾಳೆ! ಬ್ರೆಝಿಲ್ ದೇಶದ ಆಗ್ನೇಯ ಭಾಗದಲ್ಲಿ Our lady of Aparedida ಎಂಬ ಪ್ರಸಿದ್ಧ ದೇಗುಲವಿದೆ. ಈ ದೇಗುಲದಲ್ಲಿ ಬೃಹತ್ ವಿಗ್ರಹವಿದೆ. (ಬ್ರೆಝಿಲ್‌ನ ಪ್ರಾತಿನಿಧಿಕ ಸಂತಳ) ೧೮ನೇ ಶತಮಾನದಲ್ಲಿ ಪರೈಬಾ ದೊ ಸೊಲ್ ಎಂಬ ನದಿಯ ಸಮೀಪವಿರುವ ಪೋರ್ಟೋ ಇಟಾಗೌಕುವಿನಲ್ಲಿ ಈ ವಿಗ್ರಹವು ದೊರಕಿತು. ಇದನ್ನು ಜನರು ಅತ್ಯಂತ ಭಕ್ತಿ–ಗೌರವಗಳಿಂದ ಪೂಜಿಸುತ್ತಾರೆ.



ದಕ್ಷಿಣ ಅಮೆರಿಕಾದಲ್ಲಿ ವೇದಾಂತ ಪ್ರಚಾರ ಆರಂಭವಾದುದು ೧೯ನೇ ಶತಮಾನದ ಮೊದಲ ಭಾಗದಲ್ಲಿ. ಸ್ವಾಮಿ ವಿವೇಕಾನಂದರು ವಿವರಿಸಿದ ವೇದಾಂತ ತತ್ತ್ವಗಳಿಂದ ಮೂಡಿಬಂದ ವಿಶೇಷ ಆಕರ್ಷಣೆಯ ಕಾಲಘಟ್ಟದಲ್ಲೇ ಇದು ಆರಂಭಗೊಂಡಿತು. ೧೮೯೩ರ ಸೆಪ್ಟೆಂಬರ್ ತಿಂಗಳಲ್ಲಿ ಅವರು ಶಿಕಾಗೋದಲ್ಲಿ ನೀಡಿದ ಪ್ರವಚನದ ಅಲೆಗಳು ದೂರ ತೀರಗಳವರೆಗೂ ತಲುಪಿದವು. ಅಲ್ಲಿ ಅವರು ಅತ್ಯಂತ ಜನಪ್ರಿಯ ಪ್ರವಚನಕಾರರಾಗಿದ್ದರು. ಅವರ ವಿಚಾರಧಾರೆಗಳು ಎಲ್ಲೆಲ್ಲೂ ಜನರ ಭಾವನೆಗಳನ್ನು ಕೆರಳಿಸಿದವು. ದಕ್ಷಿಣ ಅಮೆರಿಕಾದ ಬ್ರೆಜಿಲ್, ಅರ್ಜೆಂಟೀನಾ ದೇಶಗಳ ವೃತ್ತಪತ್ರಿಕೆಗಳು ಆ ಕಾಲದಲ್ಲಿ ಅವರ ಪ್ರವಚನ, ಉತ್ತರ ಅಮೆರಿಕಾದ ಪ್ರವಾಸ ಮುಂತಾದವನ್ನು ಅತ್ಯಂತ ಕುತೂಹಲಕಾರಿಯಾಗಿ ಪ್ರಕಟಿಸಿದವು. ೧೯೦೦ರಷ್ಟು ಹಿಂದೆಯೇ ಬ್ರೆಜಿಲ್‌ನ ಸಾವೊ ಪೌಲೋ ನಗರದಲ್ಲಿ ಆಂಟೋನಿಯೊ ಒಲಿವಿಯೊ ರೋಡ್ರಿಗಸ್ ಎಂಬ ಪೋರ್ಚುಗೀಸ್ d Circulo Esoterico ಎಂಬ ಚಳುವಳಿಯನ್ನು ಆರಂಭಿಸಿದನು. ಈ ಚಳುವಳಿಯು ಪೌರ್ವಾತ್ಯ ಚಿಂತನೆ ಹಾಗೂ ನಿಗೂಢ ಆಚರಣೆಗಳಲ್ಲಿ ಆಸಕ್ತಿ ಹೊಂದಿತ್ತು. ಈ ಚಳುವಳಿಗೆ ಸ್ವಾಮಿ ವಿವೇಕಾನಂದರೂ ಒಬ್ಬರು ಪೋಷಕರಾಗಿದ್ದರು.

''ಶ್ರೀರಾಮಕೃಷ್ಣರ ನೇರ ಶಿಷ್ಯರಾದ ಸ್ವಾಮಿ ಅಭೇದಾನಂದರು ಪ್ರಕಟಿಸಿದ 'The Gospel of Sri Ramakrishna' ಕೃತಿಯ ಸ್ಪಾನಿಷ್ ಅನುವಾದವನ್ನು 'El Evangelio de Ramakrishna' ಎಂಬುದಾಗಿ, ಅರ್ಜೆಂಟೀನಾದ ಕೇಂದ್ರವಾದ ಬ್ಯೂನೋಸ್ ಏರಿಸ್‌ನಲ್ಲಿರುವ ಪ್ರಸಿದ್ಧ ಪ್ರಕಾಶನ ಸಂಸ್ಥೆಯಾದ 'Editorial Kier' ೧೯೧೨ ರಲ್ಲಿ ಪ್ರಕಟಿಸಿದ್ದೇ ದಕ್ಷಿಣ ಅಮೇರಿಕಾದಲ್ಲಿ ವೇದಾಂತ ಪ್ರಚಾರದ ಆರಂಭವೆನ್ನ

ಬಹುದು. ಶ್ರೀರಾಮಕೃಷ್ಣರ ಜೀವನ-ಉಪದೇಶಗಳಲ್ಲಿ ಹಾಗೂ ವೇದಾಂತದಲ್ಲಿ ಹೆಚ್ಚುತ್ತಿದ್ದ ಆಸಕ್ತಿಯಿಂದಾಗಿ, ಬ್ಯೂನೋಸ್ ಏರಿಸ್ ನಗರದಲ್ಲಿ ಕೆಲವು ಮಂದಿ ಆಸಕ್ತರು ಒಂದು ವೇದಾಂತ ಸೊಸೈಟಿ(ಸೋಷಿದಾದ್ ವೇದಾಂತ) ಆರಂಭಿಸಿದರು. ಅವರು ೧೯೨೨ರಲ್ಲಿ ಸ್ವಾಮಿ ವಿವೇಕಾನಂದರ ಕರ್ಮಯೋಗ, ರಾಜ ಯೋಗ ಹಾಗೂ ಜ್ಞಾನಯೋಗ ಕೃತಿಗಳನ್ನು ಸ್ಪಾನಿಷ್ ಭಾಷೆ ಯಲ್ಲಿ ಪ್ರಕಟಿಸಿದರು. ಎಂ. ಲೊಪೆಜ್ ವಿಲಿಮಿಲ್ ಹಾಗೂ ರಿಚರ್ಡೋ ವಿವಿ ಇವನ್ನು ಸ್ಪಾನಿಷ್‌ಗೆ ಅನುವಾದಿಸಿದ್ದಾರೆ. *(ಪ್ರಬುದ್ಧ ಭಾರತ, ೧೯೯೧ ಜನವರಿ, ಪು. ೪೬-೫೨. ಸ್ವಾಮಿ ಪರೇಶಾನಂದರು ಬರೆದ 'Sri Ramakrishna and The Vedantha Movement in Argentina' ಲೇಖನದಿಂದ)*


''ವೇದಾಂತ, ಯೋಗ ಮತ್ತು ರಾಮಕೃಷ್ಣ-ವಿವೇಕಾನಂದ ರಲ್ಲಿ ಆಸಕ್ತಿ ಬೆಳೆಯಿತು. ಇದರ ಪರಿಣಾಮವಾಗಿ 'ಎಲ್ ಹೊಗಾರ್ ಡಿ ಎಮಿಗೋಸ್ ಡಿ ಬ್ಯುನೋಸ್ ಏರಿಸ್' ಎಂಬ ಸೊಸೈಟಿಯು ೧೯೩೦ರ ಮೊದಲೇ ರೂಪುಗೊಂಡಿತು. ಭಾರತೀಯ ದಾರ್ಶನಿಕ ಚಿಂತನೆಗಳನ್ನು ಆಳವಾಗಿ ಅಧ್ಯಯನ ಮಾಡುವುದು ಇದರ ಉದ್ದೇಶವಾಗಿತ್ತು. ಜೋಸೆಫ್ ಶ್ಮಿಡ್‌ಟ್, ಡಾ. ಬಾರ್ಟೋಲೆಮಿ ಅಲೋಡಿಯೋ, ಡಾ. ಮಿಗುಲ್ ಕ್ಯಾಟಲಾನೊ ಹಾಗೂ ಇನ್ನಿತ ರರು, ಹಿಂದೂ ವೇದಾಂತಿಯೊಬ್ಬನ ಮಾರ್ಗದರ್ಶನ ಅಗತ್ಯ ವೆಂಬುದನ್ನು ಕಂಡುಕೊಂಡರು. ಶ್ಮಿಡ್‌ಟ್ ಅವರು ಮುಂದಾಳುತ್ವ ವಹಿಸಿ, 'ಪ್ರಬುದ್ಧ ಭಾರತ' ಪತ್ರಿಕೆಯ ಕಚೇರಿಗೆ ಪತ್ರ ಬರೆದರು; ಅದನ್ನು ಬೇಲೂರು ಮಠದ ಆಡಳಿತ ಮಂಡಳಿಗೆ ಕಳುಹಿಸಿ ಕೊಡಲಾಯಿತು. ಮುಂದೆ ಈ ಸೊಸೈಟಿಯು ಬೇಲೂರು ಮಠ ದೊಂದಿಗೆ ಪತ್ರವ್ಯವಹಾರ ಮುಂದುವರಿಸುತ್ತ, ತಮಗೆ ಆಧ್ಯಾ ತ್ಮಿಕ ಮಾರ್ಗದರ್ಶನ ನೀಡಲು ಅಲ್ಲಿಗೆ ಒಬ್ಬರು ಸ್ವಾಮಿಗಳನ್ನು ಕಳುಹಿಸಿಕೊಡುವಂತೆ ಕೇಳಿಕೊಂಡಿತು.'' *(ಅಲ್ಲೇ.)*

ಸ್ವಾಮಿ ಬ್ರಹ್ಮಾನಂದರ ಶಿಷ್ಯರಾಗಿದ್ದ ಸ್ವಾಮಿ ವಿಜಯಾನಂದ ಮತ್ತು ಸ್ವಾಮಿ ನಿಶ್ರೇಯಸಾನಂದರನ್ನು ಕ್ರಮವಾಗಿ ಅರ್ಜೆಂಟೀನಾ ಹಾಗೂ ದಕ್ಷಿಣ ಅಮೆರಿಕಾಗೆ ಕಳುಹಿಸಲು ಆರಿಸ ಲಾಯಿತು. ಸ್ವಾಮಿ ವಿಜಯಾನಂದರು ಬೇಲೂರು ಮಠದಲ್ಲಿದ್ದ ಶ್ರೀರಾಮಕೃಷ್ಣರ ನೇರ ಶಿಷ್ಯಂದಿರ ದಿವ್ಯ ಸತ್ಸಂಗವನ್ನು ಕಳೆದು ಕೊಳ್ಳಲು ಬಯಸಲಿಲ್ಲವೆಂದು ಹೇಳಲಾಗಿದೆ. 'ಶ್ರೀರಾಮಕೃಷ್ಣ ವಚನವೇದ'ದ ಕರ್ತೃವಾದ ಮಹೇಂದ್ರನಾಥ ಗುಪ್ತ ಅಥವಾ ಶ್ರೀ 'ಮ' ಅವರು ಸ್ವಾಮಿ ವಿಜಯಾನಂದರನ್ನು ಬಯ್ಯುತ್ತ, ಸ್ವಾಮಿ ವಿವೇಕಾನಂದರ ಸೈನಿಕರಾದ ಅವರು ಉನ್ನತ ಕಾರ್ಯಕ್ಕಾಗಿ ತಮ್ಮ ವೈಯಕ್ತಿಕ ಬಯಕೆಗಳನ್ನು ಬಲಿಗೊಡಬೇಕು ಎಂದರು.

''ಸ್ವಾಮಿ ವಿಜಯಾನಂದರು ೧೯೩೨ರ ಡಿಸೆಂಬರ್ ೧೦ರಂದು ಬ್ಯೂನೋಸ್ ಏರಿಸ್ ನಗರವನ್ನು ತಲುಪಿದರು. ಡಿಸೆಂಬರ್ ೧೮ರಂದು ಅವರು ಮೊದಲ ಸಾರ್ವಜನಿಕ ಭಾಷಣವನ್ನು ಮಾಡಿ ದರು. ಅವರು ಆಸಕ್ತಿ ಹೊಂದಿದ ಭಕ್ತರಿಗೆ ಧರ್ಮ ಹಾಗೂ ತತ್ತ್ವಶಾಸ್ತ್ರವನ್ನು ಕುರಿತ ತರಗತಿಗಳನ್ನು ನಡೆಸಲಾರಂಭಿಸಿದರು. ಅದಕ್ಕೆ ನಿಷ್ಠಾವಂತರಾದ ಅನುಯಾಯಿಗಳೂ ದೊರೆತರು. ೧೯೩೩ರಲ್ಲೇ ಅರ್ಜೆಂಟೀನಾದಲ್ಲಿ ಮೊತ್ತ ಮೊದಲ ಬಾರಿಗೆ ಶ್ರೀರಾಮಕೃಷ್ಣರ ಜಯಂತಿಯನ್ನು ಆಚರಿಸಲಾಯಿತು! ಮಿ. ಚಿಯೋಡಿ ಎಂಬ ಭಕ್ತರು ಸ್ವಾಮಿಗಳಿಗೆ ತಂಗಲು ಒಂದು ಅಪಾರ್ಟ್‌ಮೆಂಟಿನಲ್ಲಿ ವ್ಯವಸ್ಥೆ ಮಾಡಿದರು. ೧೯೩೩ರ ಮಾರ್ಚ್ ೧೮ರಂದು ಸ್ವಾಮಿ ವಿಜಯಾನಂದರು ಅರ್ಜೆಂಟೀನಾದಲ್ಲಿ ರಾಮ ಕೃಷ್ಣ ಆಶ್ರಮವನ್ನು ಆರಂಭಿಸಿದರು. ಇನ್ನೂ ಎಳವೆಯಲ್ಲಿದ್ದ ಆಶ್ರಮವು ೧೯೪೧ರ ಜುಲೈ ೩ರಂದು ಬೆಲ್ಲಾ ವಿಸ್ಟಾಗೆ ಸ್ಥಳಾಂತರಿಸ ಲ್ಪಟ್ಟಿತು – ಅಲ್ಲಿ ಶ್ರೀಮತಿ ನಿನಾನ್ ವುಲ್ಫ್ ಡಿ ಕಹ್ನ್ ಎಂಬ ಭಕ್ತೆ ಯೊಬ್ಬರು ಒಂದು ಜಮೀನನ್ನು ದಾನವಾಗಿ ಕೊಟ್ಟಿದ್ದರು.

*(ಮುಂದಿನ ಸಂಚಿಕೆಗೆ)*

**ಯುವಚೇತನ**



## 'ಶ್ರೀರಾಮಕೃಷ್ಣರ ಪುತ್ರರು!'

ಒಂದು ಪ್ರಚಂಡ ಆಧ್ಯಾತ್ಮಿಕ ತರಂಗ ಬರುತ್ತಿದೆ. ಯಾರು ನೀಚರಾಗಿರುವರೋ ಅವರು ಉತ್ತಮರಾಗುತ್ತಾರೆ. ಯಾರು ಅಜ್ಞಾನಿಗಳೋ ಅವರು ಮಹಾಪಂಡಿತರ ಗುರುಗಳಾಗುತ್ತಾರೆ. 'ಉತ್ತಿಷ್ಠತ ಜಾಗ್ರತ ಪ್ರಾಪ್ಯವರಾನ್ನಿಬೋಧತ!' ಏಳಿ, ಜಾಗೃತರಾಗಿ, ಗುರಿ ಸೇರುವವರೆವಿಗೂ ನಿಲ್ಲಬೇಡಿ. ವಿಕಾಸವೇ ಜೀವನ, ಸಂಕೋಚವೆ ಮರಣ. ತನ್ನ ಸ್ವಂತ ಸುಖವನ್ನು ನೋಡಿಕೊಳ್ಳುತ್ತ ಯಾರು ಸ್ವಾರ್ಥ ಪರರಾಗಿ, ಸೋಮಾರಿಗಳಾಗಿ ಕಾಲ ಕಳೆಯುತ್ತಿರುವರೋ, ಅವರಿಗೆ ನರಕದಲ್ಲಿಯೂ ಸ್ಥಳವಿಲ್ಲ. ಯಾರು ಸರ್ವಭೂತಗಳಲ್ಲಿಯೂ ದಯಾಪರರಾಗಿ, ಎಲ್ಲರ ಮೇಲ್ಮೆಗಾಗಿ, ತಮ್ಮ ಮೋಕ್ಷವನ್ನು ಕೂಡ ಒತ್ತಟ್ಟಿಗಿಟ್ಟು ದುಡಿಯುವರೋ, ಅವರು ಮಾತ್ರ ಶ್ರೀರಾಮಕೃಷ್ಣರ ಪುತ್ರರು. ಇತರರು ಕೃಪಣರು. ಇಂತಹ ಮಹಾ ಸಂಧಿ ಸಮಯದಲ್ಲಿ, ಯಾರು ಧೈರ್ಯದಿಂದ ನಿಂತು ಗುರುದೇವನ ಉಪದೇಶವನ್ನು ಮನೆಯಿಂದ ಮನೆಗೆ, ಹಳ್ಳಿಯಿಂದ ಹಳ್ಳಿಗೆ ಬೋಧಿಸುತ್ತಾ ಹೋಗುವವರೋ ಅವರೇ ನನ್ನ ಸಹೋದರರು. ಅವರೇ ಶ್ರೀರಾಮಕೃಷ್ಣರ ಪುತ್ರರು. ಯಾರು ಶ್ರೀರಾಮಕೃಷ್ಣರ ಶಿಷ್ಯರೋ ಅವರು ತಮ್ಮ ಸ್ವಾರ್ಥವನ್ನು ಎಂದಿಗೂ ಬಯಸುವುದಿಲ್ಲ.

*('ಪತ್ರಮಾಲೆ,' ಸ್ವಾಮಿ ವಿವೇಕಾನಂದರ ಕೃತಿಶ್ರೇಣಿ, ಸಂ.೪, ಪು. ೨೨೨-೨೩)*